# ಮೈಮನಸಿನಲ್ಲಿ ನಟನೇ ತುಂಬಿದ್ದಾನೆ

**ವಿಲಾಸ್ ರಾವ್**
ಕಲರ್ಸ್ ಕನ್ನಡದ
'ಸಿಲ್ಲಿ ಲಲ್ಲಿ'ಯ ಪಲ್ಲಿ
(ಪ್ರಹ್ಲಾದ್ ರಾವ್)



**◆ ಹೊರಗಡೆ 'ಪಲ್ಲಿ... ಪಲ್ಲಿ...' ಎಂದು ರೇಗಿಸಿದರೆ ಆ ತಕ್ಷಣ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ?**

ಖುಷಿ ಆಗುತ್ತದೆ. ಕೆಲವರು ನನ್ನ 'ನಾನ್ ಸೆನ್ಸ್' ಎಂಬ ಡೈಲಾಗ್ ಹೇಳಿಸುತ್ತಾರೆ. ಕೇಳಿದ ಮೇಲೆ ಟೀವಿ ಥರಾ ಹೇಳಿಲ್ಲ. ಇದೇ ಬೇರೆ ಥರಾ ಇದೆ ಎನ್ನುತ್ತಾರೆ. ಒಮ್ಮೆ ಸಂಜೆ ಪಾನಿಪುರಿ ತಿನ್ನಲು ಹೋಗಿದ್ದೆ. ಅಲ್ಲಿ ಒಬ್ಬರು ನನ್ನನ್ನು 'ಸಿಲ್ಲಿ ಲಲ್ಲಿ ಮಾಡ್ತೀಯಲ್ಲಾ ನೀನೇ ಅಲ್ವಾ' ಎಂದರು. ನಂತರ ಅವರು ಸುಮ್ಮನಾದರು. ನಾನೇ ಮಾತು ಮುಂದುವರಿಸಿ ದಿನಾ ನೋಡ್ತೀರಾ ಎಂದೆ. ನಂತರ ಅವರು 'ಇಲಪ್ಪಾ ಟೀವಿ ನೋಡಬೇಡ ಎಂದು ಎಷ್ಟು ಹೇಳಿದರೂ ನನ್ನ ಮಗಳು ಮಾತು ಕೇಳಲ್ಲ. ರಾತ್ರಿ ಒಂಬತ್ತು ಗಂಟೆ ಆದ ಕೂಡಲೇ ನಿಮ್ಮ ಸಿಲ್ಲಿ ಲಲ್ಲಿ ಹಾಕಿಕೊಂಡು ಕೂರುತ್ತಾಳೆ. ನೋಡದೆ ಊಟ ಮಾಡಲ್ಲ. ಅದನ್ನು ನೋಡಿ ನೋಡಿ ಟೆಸ್ಟ್‌ಗಳಲ್ಲಿಯೂ ಕಡಿಮೆ ಅಂಕ ತೆಗೆದಿದ್ದಾಳೆ...' ಹೀಗೆ ಹೇಳಿದ್ದರು. ಅದಕ್ಕೆ ನಾನು ಹೇಗೆ ಪ್ರತಿಕ್ರಿಯಿಸಬೇಕು ಎನ್ನುವುದೇ ಗೊತ್ತಾಗಲಿಲ್ಲ. ಬೈತಾರೋ ಹೊಗಳ್ತಾರೋ ಗೊತ್ತಾಗಲಿಲ್ಲ. ಯಾವುದೋ ನೆಪದಲ್ಲಿ ನಾನು ಪಕ್ಕಕ್ಕೆ ಸರಿದು ನಿಂತೆ.

**◆ ನಿಮಗೆ ರಂಗದ ನಂಟು ಬೆಳೆದಿದ್ದು ಹೇಗೆ?**

ನಾನು ಹೈಸ್ಕೂಲ್‌ನಲ್ಲಿ ಓದುವಾಗ ವೇದಿಕೆಯ ನಂಟು ಬೆಳೆಯಿತು. ನಮ್ಮ ಶಾಲೆಯಲ್ಲಿ ಏನೇ ಕಾರ್ಯಕ್ರಮ ಇದ್ದರೂ ನಾನು ಮುಂದೆ ಇರ್ತಾ ಇದ್ದೆ. ಆಗ ನಟನಾಗಬೇಕು ಎನ್ನುವ ಕಲ್ಪನೆಯೂ ಇರಲಿಲ್ಲ. ಅದೇ ಹೊತ್ತಿನಲ್ಲಿ ತುಮಕೂರಿನಲ್ಲಿ 'ಚಂದ್ರೋದಯ ಕಲಾ ಸಂಘ' ಪರಿಚಯ ಆಯಿತು. ಆ ವೇದಿಕೆ ಮೂಲಕ ಅನೇಕ ನಾಟಕಗಳನ್ನು ಆಡಿದೆ. ಇದೇ ಕಾರಣಕ್ಕೋ ಏನೋ ಪಿಯುಸಿಯಲ್ಲಿ ಎರಡು ವರ್ಷ ಓದನ್ನು ನಿಲ್ಲಿಸಿದೆ. ಆದರೆ ರಂಗ ಚಟುವಟಿಕೆಯನ್ನು ಮಾತ್ರ ಮಾಡ್ತಾ ಇದ್ದೆ. ನಂತರ ಎಂಜಿನಿಯರಿಂಗ್ ಮಾಡಬೇಕು ಎನ್ನುವ ಆಸೆ ನನಗಿತ್ತು. ಪಿಯುನಲ್ಲಿ ರ‍್ಯಾಂಕಿಂಗ್ ಕಡಿಮೆ ಇದ್ದಿದ್ದರಿಂದ ನಾನು ಬಯಸಿದ ವಿಭಾಗದಲ್ಲಿ ಬಿಇಗೆ ಸೀಟು ಸಿಗಲಿಲ್ಲ. ಹಾಗಾಗಿ ಅದನ್ನು ಬಿಟ್ಟು ತುಮಕೂರಿನಲ್ಲಿಯೇ ಬಿಸಿಎಗೆ ಸೇರಿದೆ. ಮೊದಲ ವರ್ಷ ಶೇ. 92 ಅಂಕ ಗಳಿಸಿ ಪಾಸಾದರೂ ತರಗತಿಗೆ ಹೋಗುವುದನ್ನು ನಿಲ್ಲಿಸಿದೆ. ಪರೀಕ್ಷೆಗೆ ಮಾತ್ರ ಹೋಗುತ್ತಿದ್ದೆ. ಬೆಂಗಳೂರಿನ ಸಂಪರ್ಕವನ್ನು ಹೆಚ್ಚಿಸಿಕೊಂಡೆ. ಯಾರಾದರೂ ಸಿನಿಮಾದವರು ಪರಿಚಯ ಆಗುತ್ತಾರೆ ಎನ್ನುವ ಬಯಕೆ ನನ್ನದು. ಬೆಂಗಳೂರನಲ್ಲಿ ಸುತ್ತಾಡುತ್ತಿದ್ದಾಗ ನಟನೆ ಕ್ಲಾಸ್‌ಗೆ ಹೋದರೆ ಪರಿಚಯ ಆಗಬಹುದು ಎಂದು ಅನ್ನಿಸಿತು. ಹೇಗಾದರೂ ಸರಿ ಪರಿಚಯ ಮಾಡಿಕೊಳ್ಳಬೇಕು. ಯಾವುದೋ ಒಂದು ಸಿನಿಮಾ ತರಬೇತಿ ತರಗತಿಗೆ ಸೇರಿದೆ. ಮೂರು ತಿಂಗಳ ಕೋರ್ಸ್ ಎಂದು ಹಣ ಪಾವತಿ ಮಾಡಿಕೊಂಡ ಅವರು 10 ದಿನಕ್ಕೆ ಕೋರ್ಸ್ ಮುಗಿಯಿತು ಎಂದು ಹೇಳಿ ಕಳುಹಿಸಿದರು.

**◆ ನೀವು ಕಿರುಚಿತ್ರ ಮಾಡಿದ್ದು ಏಕೆ?**

ನಿತ್ಯವೂ ನಿರ್ದೇಶಕರು– ನಿರ್ಮಾಪಕರನ್ನು ಹುಡುಕುವ ಕೆಲಸ ಮಾತ್ರ ನಿಲ್ಲಲೇ ಇಲ್ಲ. ನನ್ನ ಮಾತನ್ನು ಕೇಳಿಸಿಕೊಳ್ಳುವ ಸಮಯ ಯಾರಿಗೂ ಇರುತ್ತಿರಲಿಲ್ಲ. ನನ್ನನ್ನು ನಾನು ಪರಿಚಯಿಸಿಕೊಳ್ಳುವ ದೃಷ್ಟಿಯಿಂದ 15 ನಿಮಿಷಗಳ 'ಪ್ರಸೆಂಟ್ ಲವ್' ಎಂಬ ಚಿತ್ರ ಮಾಡಿದೆ. ಗೆಳೆಯ ನಿರ್ದೇಶನ ಮಾಡಿದ್ದರು. ಸುಮಾರು ನಿರ್ದೇಶಕರಿಗೆ ತೋರಿಸಿದೆ. ಆದರೂ ಅವಕಾಶವೇನೂ ತಕ್ಷಣ ಸಿಗಲಿಲ್ಲ. ಪ್ರಯತ್ನವನ್ನು ಮಾತ್ರ ಮುಂದುವರಿಸಿದೆ. ನಂತರ 'ಸಮಾನತೆ' ಎನ್ನುವ ಕಲಾತ್ಮಕ ಸಿನಿಮಾದಲ್ಲಿ ನಟಿಸಿದೆ. ನಂತರದ ಸುತ್ತಾಟದಲ್ಲಿ ಸುಮಾರಷ್ಟು ಅವಕಾಶದ ಭರವಸೆಯಂತೂ ಸಿಗುತ್ತಿದ್ದವು ಅವಕಾಶ ಮಾತ್ರ ಸಿಗುತ್ತಿರಲಿಲ್ಲ. ಹೆಸರಾಂತ ನಿರ್ದೇಶಕರ ಸಿನಿಮಾಗಳಲ್ಲಿಯೂ ನೀಡಿದ ಭರವಸೆ ಈಡೇರಲಿಲ್ಲ. ನನ್ನನ್ನು ನಾನು ಪರಿಚಯಿಸಿಕೊಂಡು ಸುತ್ತಾಡಿದರೆ ಪ್ರಯೋಜನ ಇಲ್ಲ ಎಂದು ಟೀವಿಯತ್ತ ಮುಖ ಮಾಡಿದೆ. 'ಅಕ್ಕ'ದಲ್ಲಿ ಪುಟ್ಟ ಪಾತ್ರ ನಂತರ ಧಾರಾವಾಹಿಯಲ್ಲಿ ಚಿಕ್ಕ ಪಾತ್ರ. 'ಪತ್ತೇದಾರಿ ಪ್ರತಿಭಾ', 'ಶಾಂತಂ ಪಾಪಂ'ನಲ್ಲಿ ನಟಿಸಿದೆ. 'ಮಗಳು ಜಾನಕಿ'ಗೆ ಹೋಗಲು ಯಾರೋ ಹೇಳಿದರು. ಸೀತಾರಾಂ ಆಡಿಷನ್ ತೆಗೆದುಕೊಂಡರು. ಮೂರು ಪಾತ್ರದಲ್ಲಿ ಒಂದು ಪಾತ್ರ ಎಂದು ಮೂರು ಬಾರಿ ಆಡಿಷನ್ ನೀಡಿದೆ. ಕೊನೆಯ ಹಂತದಲ್ಲಿ ಪಾತ್ರ ಕೈತಪ್ಪಿದ್ದು ತುಂಬ ನಿರಾಸೆಯನ್ನು ಉಂಟುಮಾಡಿತು. ಅದಾದ ಮೇಲೆ 'ಸಿಲ್ಲಿ ಲಲ್ಲಿ'ಗೆ ಅವಕಾಶ ಸಿಕ್ಕಿದೆ.

**◆ ನಿಮ್ಮ ಮನೆಯವರನ್ನು ನಿಭಾಯಿಸಿದ್ದು ಹೇಗೆ?**

ನಮ್ಮ ಮನೆಯಲ್ಲಿ ಎಲ್ಲರೂ ಓದಿದ್ದಾರೆ. ನಾನೂ ಬಿಸಿಎ ಓದಿದೆ. ನನ್ನ ಅಣ್ಣ ಎಂಜಿನಿಯರ್ ಆಗಿದ್ದ. ನಾನು ಓದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಹಾಗೆಂದು ಮನೆಯವರೂ ನನ್ನ ಬಗ್ಗೆ ತುಂಬ ಬೇಸರವಾದರು. ಅವರು ಹಣಕಾಸು ಸಹಾಯ ಮಾಡಬೇಕಿಲ್ಲ. ಆದರೆ ನನ್ನ ಆಸೆಯನ್ನೂ ಬೆಂಬಲಿಸಲಿಲ್ಲ. ಅಕ್ಕಪಕ್ಕದವರ ಊರು ಬಿಟ್ಟು ಓಡಿ ಹೋಗಿದ್ದಾನೆ ಎನ್ನುವ ಮಾತಿಗೆ ಅವರು ಹೆಚ್ಚು ಪ್ರಾಮುಖ್ಯತೆ ಕೊಟ್ಟರು. ಅಂತಹ ಚುಚ್ಚು ಮಾತಿನಿಂದ ನೊಂದು ನನ್ನ ಕುಟುಂಬದ ಸದಸ್ಯರು ನನಗೇ ಬೈಯುತ್ತಿದ್ದರು. ಬೆಂಗಳೂರಿಗೆ ಬಂದು ಒಂದು ವರ್ಷ ಕಳೆದರೂ ಹೇಳುವುದಕ್ಕೆ ನಾನು ಏನು ಮಾಡುತ್ತಿದ್ದೇನೆ ಎನ್ನುವುದೇ ಇರಲಿಲ್ಲ. ಎಲ್ಲ ಚೌಚೌ ಮಾಡ್ತಾ ಇದ್ದೆ. ನನ್ನ ಮೇಲೆ ವಿಶ್ವಾಸವನ್ನೇ ಅವರು ಕಳೆದುಕೊಂಡಿದ್ದರು. ಕೊನೆಗೆ ಸಾಂತ್ವನದ ಮಾತನ್ನೂ ಹೇಳಲಿಲ್ಲ. ಆದರೆ ನನ್ನ ಛಲವನ್ನು ನಾನು ಬಿಟ್ಟಿಲ್ಲ. ಇಲ್ಲಿಯವರೆಗೆ ಬಂದಿದ್ದೇನೆ. ಇನ್ನೂ ಮುಂದೆ ಸಾಗುತ್ತೇನೆ ಎನ್ನುವ ವಿಶ್ವಾಸ ಮೂಡಿದೆ. ನಟನೆ ಮೈಮನಸು ತುಂಬಿದೆ. ಇಲ್ಲಿ ನನಗೊಂದು ಐಡೆಂಟಿಟಿ ಸಂಪಾದಿಸುತ್ತೇನೆ.

■ **ರಾಘವೇಂದ್ರ ಕೆ.**